# ಔಷಧೀಯ ಸಸ್ಯ ಅತಿಬಲ

ಅತಿಬಲ ಗಿಡ ಪ್ರಮುಖ ಔಷಧೀಯ ಸಸ್ಯ. ಈ ಗಿಡಗಳು ಬಯಲು ಸೀಮೆಯಲ್ಲಿ ಹೆಚ್ಚಾಗಿ ಕಂಡು ಬರುವುದಲ್ಲದೇ ಮಲೆನಾಡಿನಲ್ಲಿಯೂ ಈ ಗಿಡ ಕಾಣಿಸುತ್ತದೆ. ಈ ಸಸ್ಯಕ್ಕೆ ಹೃದಯ ಕಾಯಿಲೆಯಿಂದ ಪುರುಷತ್ವದ ಸಮಸ್ಯೆಯವರೆಗೂ ಹಲವು ರೋಗಗಳನ್ನು ಗುಣಪಡಿಸುವ ಶಕ್ತಿ ಇದೆ.

ಹಳದಿ ಬಣ್ಣದ ಸಣ್ಣ ಗಾತ್ರದ ಹೂವು ಬಿಡುವ ಇದರ ಎಲೆಯು ಹೃದಯಾಕಾರ ಹೊಂದಿದೆ. ಕಾಂಡವು ಅಂಟಾದ ಸಣ್ಣ ಸಣ್ಣ ರೋಮಗಳನ್ನು ಹೊಂದಿದೆ. ಇಂತಹ ಗಿಡ ಕಂಡಲ್ಲಿ ಕಳೆ ಎಂದು ಕಿತ್ತೆಸೆಯದೆ ಅದನ್ನು ಸಮರ್ಪಕವಾಗಿ ಬಳಸಿಕೊಂಡು ಬೆಳೆಸಬೇಕು. ಈ ಸಸ್ಯವನ್ನು ವಜ್ರಕಾಯ, ವಜ್ರದೇಹಿ, ವಜ್ರಮುಷ್ಟಿ, ಕಂಕತಿಕ, ಕಂಘಿನಿ, ಪೆತರಿ, ಶ್ರೀ ಮುದ್ರೆಗಿಡ, ಪೆಟ್ಟಿಗೆಗಿಡ, ತುತ್ತಿಗಿಡ, ತುತ್ತರಿ ಚೆಟ್ಟು, ತುತ್ತುರಿಬೆಂಡ, ಪೆರುನ್ ತುತ್ತಿ, ಮಧುರಸ್ಕಂಧ, ಮೊದಲಾದ ಹೆಸರುಗಳಿಂದ ಕರೆಯುತ್ತಾರೆ. ಅತಿಬಲವೆಂದು ಕರೆಯಲಾಗುವ ಈ ಸಸ್ಯವು ಪಾಳುಭೂಮಿ, ಹುಲ್ಲುಗಾವಲು, ಹೊಲಗಳ ಬದುಗಳ ಮೇಲೆ, ರಸ್ತೆಗಳ ಪಕ್ಕ ಎಲ್ಲೆಂದರಲ್ಲಿ ಕಳೆಗಿಡದಂತೆ ಬೆಳೆಯುತ್ತದೆ. ಇದರಲ್ಲಿ ತುತ್ತಿ ಮತ್ತು ನೆಲ ತುತ್ತಿ ಎಂಬ ಎರಡು ಪ್ರಭೇದಗಳಿದ್ದು, ಎರಡರಲ್ಲೂ ಔಷಧೀಯ ಗುಣಗಳು ಹೇರಳವಾಗಿದೆ. ತುತ್ತಿ 36 ಅಡಿ ಎತ್ತರಕ್ಕೆ ಬೆಳೆದರೆ, ನೆಲತುತ್ತಿಯು ತುಸು ಸಣ್ಣಗಿಡವಾಗಿದ್ದು, 12 ಅಡಿ ನೆಲದಲ್ಲಿ ಬಳ್ಳಿಯಂತೆ ಹಬ್ಬಿಕೊಂಡು ಬೆಳೆಯುತ್ತದೆ. ಇದರ ಬೇರು ಸಹಿತವಾಗಿ ಎಲ್ಲಾ ಭಾಗಗಳೂ ಔಷಧೀಯ ಗುಣಗಳಿಂದ ಕೂಡಿದೆ.

ಅತಿಬಲ ಗಿಡದ ಬಗ್ಗೆ ರಾಮಾಯಣ ಮತ್ತು ಮಹಾಭಾರತದಲ್ಲೂ ಉಲ್ಲೇಖವಿದ್ದು, ವಿಶ್ವಾಮಿತ್ರ ಮಹರ್ಷಿಗಳು, ಬ್ರಾಹ್ಮೀ ಮುಹೂರ್ತದಲ್ಲಿ, ನಿರ್ಜನ ಪ್ರದೇಶದಲ್ಲಿ ರಾಮ ಲಕ್ಷ್ಮಣರಿಗೆ ರಹಸ್ಯವಾಗಿ ಮಂತ್ರೋಪದೇಶ ಮಾಡುತ್ತಿದ್ದಾಗ, ಅಲ್ಲೇ ಬೆಳೆದಿದ್ದ ಎರಡು ಗಿಡಗಳು ಗೌಪ್ಯವಾಗಿ ಮಹರ್ಷಿಗಳು ಹೇಳಿಕೊಡುತ್ತಿದ್ದ ಮಂತ್ರಗಳನ್ನು ಕೇಳಿಸಿಕೊಂಡವು. ಭಯದಲ್ಲಿದ್ದ ಆ ಎರಡು ಗಿಡಗಳು ಇದನ್ನು ವಿಶ್ವಾಮಿತ್ರರಿಗೆ ತಿಳಿಸಿ ಕ್ಷಮೆ ಯಾಚಿಸಿದಾಗ ವಿಶ್ವಾಮಿತ್ರರು ನೀವು ಭೂಲೋಕದೆಲ್ಲೆಡೆ ಹರಡಿದಂತೆ ಬೆಳೆದು ಜನರಿಗೆ ಆರೋಗ್ಯ ಹಾಗೂ ಬಲವನ್ನು ನೀಡಿ ಎಂದು ಆಶೀರ್ವಾದ ಮಾಡಿದರೆಂಬ ಪ್ರತೀತಿ ಇದೆ. ಆ ಎರಡು ಗಿಡಗಳೇ ಬಲ ಮತ್ತು ಅತಿಬಲ.



ಅತಿಬಲ ಸಸ್ಯವು ನಾಯಿಯ ಕಡಿತಕ್ಕೂ ಒಂದು ದಿವ್ಯೌಷಧಿ. ಅತಿಬಲದ ಎಲೆಗಳನ್ನು ಜಜ್ಜಿ ಅದರ ರಸವನ್ನು ನಾಯಿ ಕಚ್ಚಿದ ಗಾಯಕ್ಕೆ ಹಚ್ಚಿ ಬಟ್ಟೆಯ ಸಹಾಯದಿಂದ ಕಟ್ಟಿದರೆ. ನಂಜು ಏರುವುದು ತಡೆದು ಗಾಯವೂ ಬೇಗ ವಾಸಿಯಾಗುತ್ತದೆ. ತೀವ್ರ ರಕ್ತಸ್ರಾವವಿರುವ ಗಾಯಗಳಿಗೂ ಇದರ ರಸವನ್ನು ಬಳಸಬಹುದು. ಅತಿಬಲದ ಎಲೆಯ ಕಷಾಯಕ್ಕೆ ಕಲ್ಲುಸಕ್ಕರೆ ಹಾಕಿ ಸೇವಿಸಿದಲ್ಲಿ ವಿಷಮಶೀತ ಜ್ವರ ಕಡಿಮೆಯಾಗುತ್ತದೆ. ದಿನಗಳಲ್ಲಿ ಎರಡು ಬಾರಿ ಅತಿಬಲ ಎಲೆಯ ಕಷಾಯ ಕುಡಿಯುವುದರಿಂದ ಹೃದಯದ ರಕ್ತನಾಳಗಳಲ್ಲಿ ರಕ್ತ ಹೆಪ್ಪುಗಟ್ಟಿ ಬ್ಲಾಕ್ ಆಗುವ ಸಾಧ್ಯತೆಯನ್ನು ಕಡಿಮೆ ಮಾಡಿ ಹೃದಯ ರೋಗದ ಸಮಸ್ಯೆಯನ್ನು ನಿವಾರಿಸುತ್ತದೆ. ಮಕ್ಕಳಿಗೆ ಈ ಕಷಾಯವನ್ನು ಎರಡು ಚಚಮಚದಷ್ಟು ಕುಡಿಸುವುದರಿಂದ ಜಂತು ಹುಳು ಸಮಸ್ಯೆ ನಿವಾರಣೆಯಾಗುತ್ತದೆ.

ಅತಿಬಲ ಸಸ್ಯದ ಐದಾರು ಎಲೆಗಳನ್ನು ಒಂದು ಮಣ್ಣಿನ ಮಡಿಕೆಯಲ್ಲಿ ಹಾಕಿ, ಅದಕ್ಕೆ 200ಮಿ.ಲೀ ನೀರು, ಚಿಟಿಕೆ ಅರಶಿನ, ಚಿಟಿಕೆ ಜೀರಿಗೆ, 3–4 ಕಾಳುಮೆಣಸು ಹಾಕಿ, ಒಲೆಯ ಮೇಲಿಟ್ಟು ಮಂದವಾದ ಉರಿಯಲ್ಲಿ ಚೆನ್ನಾಗಿ ಕುದಿಸಿ, 100ಮಿ.ಲೀ ನಷ್ಟು ಆದಾಗ ಅದನ್ನು ಒಲೆಯಿಂದ ತೆಗೆದು ಸೋಸಿಕೊಂಡು, ಬೆಳಿಗ್ಗೆ ಮಧ್ಯಾಹ್ನ ಸಂಜೆ 30–40ಮಿ.ಲೀ ನಂತೆ ಕುಡಿಯುತ್ತಿದ್ದಲ್ಲಿ ಮೂತ್ರಕೋಶದದ ಕಲ್ಲು ಕರಗಿ, ಮೂತ್ರದ ಮೂಲಕ ಹೊರಬರುತ್ತದೆ. ಇದರ ಸೇವನೆಯಿಂದ ದೃಷ್ಟಿದೋಷಗಳು ದೂರವಾಗಿ, ಕಣ್ಣುಗಳು ಕಾಂತಿಯುತವಾಗುತ್ತವೆ. ಮತ್ತು ಶ್ವಾಸಕೋಶ ಸಂಬಂಧಿತ ಸಮಸ್ಯೆಗಳು ನಿವಾರಣೆಯಾಗುತ್ತದೆ.

■ **ಸಂತೋಷ ರಾವ್ ಪೆರ್ಮುಡ**

## ಹೊಸ ಧಾರಾವಾಹಿ

### ಮೃಗತೃಷ್ಣ
THE MIRAGE

### ಬಿಸಿಲುಗುದುರೆಯ ರೋಚಕ ಸವಾರಿ

ಮೃಗತೃಷ್ಣ ಎಂದರೆ ಬಿಸಿಲುಗುದುರೆ, ಮರೀಚಿಕೆ. 'ಮೃಗತೃಷ್ಣ' ಕಾದಂಬರಿ, ರಾಗರಂಗುಗಳ ಜೊತೆಗೆ ಬದುಕಿನ ಕ್ಷಣಭಂಗುರತೆಯನ್ನು ಚಿತ್ರಿಸುತ್ತದೆ. ನೀರಮೇಲಿನ ಗುಳ್ಳೆಯ ಚೆಲುವು ಮತ್ತು ಟೊಳ್ಳನ್ನು ಕಾಣಿಸುತ್ತದೆ. ವ್ಯವಹಾರದ ಕಾರಣಕ್ಕಾಗಿ ಕೇರಳಕ್ಕೆ ತೆರಳುವ ಕಥಾನಾಯಕನಿಗೆ ಕಲೆ, ಕಾಮ ಮತ್ತು ಜೀವನಪ್ರೇಮದ ಬೆಚ್ಚನೆಯ ಅನುಭವಗಳು ಎದುರಾಗುತ್ತವೆ. ಆದೇಕಾಲಕ್ಕೆ ಸುರಿಯುವ ಭಾರೀ ಮಳೆ ಹಾಗೂ ಅದರಿಂದ ಉಂಟಾಗುವ ಪ್ರವಾಹ ಬದುಕಿನ ಮತ್ತೊಂದು ಮಗ್ಗುಲನ್ನು ಪರಿಚಯಿಸುತ್ತದೆ. ರಾಜಕಾರಣ ಮತ್ತು ಉದ್ಯಮದ ಒಳಸುಳಿಗಳೊಂದಿಗೆ ಸಂಬಂಧಗಳ ಸಂಕೀರ್ಣತೆಯನ್ನು 'ಮೃಗತೃಷ್ಣ' ಅಪೂರ್ವವಾಗಿ ಹಿಡಿದಿಟ್ಟಿದೆ.

ಹಿರಿಯ ಲೇಖಕ ಕೇಶವರೆಡ್ಡಿ ಹಂದ್ರಾಳರ ರಮ್ಯ, ರೋಚಕ ಕಾದಂಬರಿ 'ಮೃಗತೃಷ್ಣ' ಮುಂದಿನ ಸಂಚಿಕೆಯಿಂದ ಧಾರಾವಾಹಿಯಾಗಿ ಓದುಗರ ಮುಂದೆ.